**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃಗೋಕಾಕ**

**ಸಿ.ಸಿ ನಂ. 1148/2011**

ಚಾ.ಸಾ-52 ಪ್ರಾ.ಸಾ-23

ಪ್ರಮಾಣವಚನ ಬೋಧಿಸಲಾಯಿತು ದಿನಾಂಕಃ 28-11-2024

| | | |
|---|---|---|
| ಹೆಸರು | : | ಮಾರುತಿ ಭೀಮಪ್ಪ ಗುಜನಾಳ |
| ತಂದೆ ಹೆಸರು | : | ಭೀಮಪ್ಪ ಗುಜನಾಳ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಪಿಎಸ್ಐ |
| ವಾಸಸ್ಥಳ | : | ಮುತಗಾ ಗ್ರಾಮ, ಜಿಃ ಬೆಳಗಾವಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಜನೇವರಿ 2011 ರಿಂದ ಅಗಸ್ಟ 2011 ವರೆಗೆ ಘಟಪ್ರಭಾ ಪೋಲಿಸ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24-03-2011 ರಂದು ಬೆಳಿಗ್ಗೆ 11.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ದೂರವಾಣಿ ಮುಖಾಂತರ ಬಳೋಬಾಳ ಹಾಗೂ ಸಂನಕೇರಿ ಯಾದವಾಡ ರಸ್ತೆಯ ಮೇಲೆ ಬಾಬು ಬಸಗೌಡ ಪಾಟೀಲ ರವರ ಜಮೀನಿದ ಹತ್ತಿರ ಒಂದು ಮ್ಯಾಕ್ಸಿ ಕ್ಯಾಬ ಪಲ್ಟಿ ಆಗಿ ಅಪಘಾತ ಆಗಿರುತ್ತದೆ. ಅಪಘಾತದಲ್ಲಿ ಒಬ್ಬರು

ತೀರಿಕೊಂಡಿದ್ದು ಬಹಳಷ್ಟು ಜನರಿಗೆ ಗಾಯಗಳು ಆಗಿರುತ್ತವೆ ಎಂದು ಮಾಹಿತಿ ಬಂದಿರುತ್ತದೆ.

ಮಾಹಿತಿ ಬಂದ ಕೂಡಲೇ ನಾನು ಸಿಬ್ಬಂದಿ ಸಂಗಡ ಸ್ಥಳಕ್ಕೆ ಹೋಗಿ ಗಾಯಾಳು ಹಾಗೂ ಮೃತನಿಗೆ ಗೋಕಾಕ ಆಸ್ಪತ್ರೆಗೆ ಕಳುಹಿಸಿದ ಬಗ್ಗೆ ಮಾಹಿತಿ ಗೊತ್ತಾಗಿ ನಾನು ಕೂಡಲೇ ಸಿಬ್ಬಂದಿಯವರನ್ನು ಕರೆದುಕೊಂಡು ಗೋಕಾಕ ಆಸ್ಪತ್ರೆಗೆ ಭೇಟಿ ನೀಡಿ ಶವಗಾರದಲ್ಲಿ ಮೃತ ಶಿವಾನಂದ ಶಂಕ್ರೆಪ್ಪ ಗೊಠಡಕಿ ರವರ ಶವವನ್ನು ನೋಡಿ ನಂತರ ಉಮರಾಣಿ ಆಸ್ಪತ್ರೆಗೆ ಬಂದು ಉಪಚಾರ ಹೊಂದುತ್ತಿದ್ದ ಚಾಸಾ-1 ರವರು ಚಾಸಾ-42 ರವರಿಗೆ ಹೇಳಿಸಿ ಬರೆಯಿಸಿಕೊಟ್ಟ ಪಿರ್ಯಾದಿಯನ್ನು ಪಡೆದುಕೊಂಡು ಠಾಣೆಗೆ ಹೋಗಿ ಠಾಣಾ ಗುನ್ಹಾ ಸಂಖ್ಯೆ 57/2011 ಕಲಂ. 279, 337, 338, 304(A) of IPC ಮತ್ತು 134 R/w 187 ಮತ್ತು 192 of MV Act ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ಹಾಗೂ ಪಿರ್ಯಾದಿಯನ್ನು ಹಾಗೂ ಅವುಗಳ ದೃಢಿಕೃತ ನಕಲುಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ದೂರು ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು

ಪ್ರ.ವ.ವರದಿ ಎಂದು ಗುರುತಿಸಿದ್ದು ಅದನ್ನು ನಿಪಿ-77 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-77(ಎ ಮತ್ತು ಬಿ) ಎಂದು ಗುರುತಿಸಲಾಯಿತು.

ತದನಂತರ ನಾನು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-53 ರವರಿಗೆ ವಹಿಸಿಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ದಿಃ 24-03-2011 ರಂದು ಠಾಣಾಧಿಕಾರಿ ನಾನೇ ಆಗಿದ್ದೆ. ನನಗೆ 11 ಗಂಟೆಗೆ ಮಾಹಿತಿ ಬರುವ ಪೂರ್ವದಲ್ಲಿ ಬೇರೆ ಯಾರು ಪೋನ ಮಾಡಿ ಅಪಘಾತದ ಬಗ್ಗೆ ತಿಳಿಸಿರಲಿಲ್ಲ. ನಾನು ಯಾವ ಸಿಬ್ಬಂದಿಯರನ್ನು ಘಟನಾ ಸ್ಥಳಕ್ಕೆ ನನ್ನೊಂದಿಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಹೆಸರು ನೆನಿರುವುದಿಲ್ಲ. ನನಗೆ 11.10 ಸಮಯಕ್ಕೆ ಮಾಹಿತಿ ಬಂದಿರುತ್ತದೆ. ನಾನು 10 ನಿಮೀಷದಲ್ಲಿ ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ದಿನ ನಾನು ಸರಕಾರಿ ಜೀಪದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ದಿನ ನಮ್ಮ ಪೋಲಿಸ ಸಿಬ್ಬಂದಿ ವಾನವನ್ನು ಚಲಾಯಿಸುತ್ತಿದ್ದರು.

ನಾನು ಯಾವ ಸಮಯಕ್ಕೆ ಗೋಕಾಕ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಪಿರ್ಯಾದಿಯನ್ನು ನಮ್ಮ ಮಾಹಿತಿಯ ಪ್ರಕಾರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಇದ್ದ ಮಾಹಿತಿ ಪ್ರಕಾರ ಅವರು ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ಪಿರ್ಯಾದಿಯನ್ನು ಚಾಸಾ-42 ರವರು ಬರೆದಿರುತ್ತಾರೆ. ಪಿರ್ಯಾದಿಯನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ ಎಂದರೆ ಸರಿ.

ಪಿರ್ಯಾದಿಯನ್ನು 14.30 ಗಂಟೆಗೆ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಸರ್ಕಾರಿ ಆಸ್ಪತ್ರೆಗೆ ತದನಂತರ ಉಮರಾಣಿ ಆಸ್ಪತ್ರೆಗೆ ಭೇಟಿ ನೀಡಬೇಕಾದರೆ 4 ತಾಸು ಆಗುತ್ತದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡಾ ಚಾಸಾ-1ರವರೊಂದಿಗೆ ಮಿಲಾಪೆ ಆಗಿ ಆರೋಪಿ ವಿರುದ್ದ ಸುಳ್ಳು ಪಿರ್ಯಾದಿ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)**
**ಹೆ.ದಿ.&ನ್ಯಾ.ದಂ.,ಗೋಕಾಕ.**